ಕಾರ್ಯವನ್ನು ಮಾಡುತ್ತೇವೆ.

2. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಂದಿರಾ ಆವಾಸ್, ಅಂಬೇಡ್ಕರ್ ಮನೆ ಹಾಗೂ ದಶಲಕ್ಷಬಾವಿ ಯೋಜನೆಗಳಲ್ಲಿ ಮಂಜೂರಾದ ಹಣ ದುರುಪಯೋಗ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಸನ್ಮಾನ್ಯ ಉಪಾಧ್ಯಕ್ಷರೇ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಇಂದಿರಾ ಆವಾಸ್, ಅಂಬೇಡ್ಕರ್ ಮನೆ ಹಾಗೂ ದಶ ಲಕ್ಷ ಬಾವಿ ಯೋಜನೆಗಳಿಗೆ ಮಂಜೂರಾದ 15 ಲಕ್ಷ ರೂಪಾಯಿಗೂ ಹೆಚ್ಚು ಹಣ ದುರುಪಯೋಗವಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷರೇ, 1992-93 ಮತ್ತು 1993-94ನೇ ಸಾಲಿಗೆ ಸಂಬಂಧಿಸಿದಂತೆ, ಇಂದಿರಾ ಆವಾಜ್, ಅಂಬೇಡ್ಕರ್ ಮನೆ ಹಾಗೂ ದಶಲಕ್ಷ ಬಾವಿ ಯೋಜನೆಗಳ ಅನುಷ್ಠಾನದಲ್ಲಿ ದುರುಪಯೋಗವಾಗಿದೆ ಎನ್ನಲಾಗಿರುವ ಪ್ರಕರಣಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರಿಗೆ ಸ್ಥಳ ತನಿಖೆ ಮಾಡಿ, ವರದಿ ನೀಡಲು ಸೂಚಿಸಿರುತ್ತೇನೆ.

ತೀರ್ಥಹಳ್ಳಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಇಂದಿರಾ ಆವಾಜ್ ಯೋಜನೆ ಹಾಗೂ ದಶಲಕ್ಷ ಬಾವಿ ಯೋಜನೆಗಳಿಗೆ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಹಣದಲ್ಲಿ ಸುಮಾರು ರೂ. 10.00 ಲಕ್ಷ ಹಣವನ್ನು ಖರ್ಚು ಮಾಡದೆ ತೀರ್ಥಹಳ್ಳಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ಬ್ಯಾಂಕಿನಲ್ಲಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರು ಸ್ಥಳ ತನಿಖೆ ಮಾಡಿದ್ದು, ಕಿಗಾಡಿ, ನೆಲ್ಲಿಸಾರ, ಕನ್ನಂಗಿ ಮತ್ತು ಇತರೆ ಗ್ರಾಮಗಳಲ್ಲಿ ಇಂದಿರಾ ಆವಾಜ್ ಮನೆಗಳು ಪೂರ್ಣವಾಗಿರುವುದಿಲ್ಲ. ಅಂದಾಜು ರೂ. 3.00 ಲಕ್ಷಕ್ಕೂ ಹೆಚ್ಚು ಹಣವನ್ನು ಕಾಮಗಾರಿ ಪೂರ್ಣಗೊಳ್ಳದೆ ಪಾವತಿ ಮಾಡಿರುವುದು ಕಂಡು ಬಂದಿದೆ. ಇದಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ಶ್ರೀ ಡಿ.ಟಿ.ಕೆಂಚಪ್ಪ, ಕಿರಿಯ ಅಭಿಯಂತರರು ಇವರು ತಯಾರಿಸಿದ್ದು ಮೇಲ್ನೋಟಕ್ಕೆ ಹಣ ದುರುಪಯೋಗದ ಪ್ರಕರಣವೆಂದು ಕಂಡುಬಂದಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರು ಸದರಿ ಕಿರಿಯ ಅಭಿಯಂತರರನ್ನು ದಿನಾಂಕ 27-5-95ರಂದು ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆಗೆ ಆದೇಶ ಹೊರಡಿಸಿದ್ದಾರೆ. ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಸದರಿ ಕಿರಿಯ ಅಭಿಯಂತರರನ್ನು ದಿನಾಂಕ 12-10-95ರಂದು ಮರುನೇಮಕ ಮಾಡಿ ಸೊರಬ ತಾಲ್ಲೂಕಿಗೆ ವರ್ಗಾಯಿಸಲಾಗಿದೆ. ಇಲಾಖೆ ವಿಚಾರಣೆ ಪ್ರಗತಿಯಲ್ಲಿದೆ.

ನೆರಳು ಭಾಗ್ಯ ಯೋಜನೆಯಡಿಯಲ್ಲಿ 1993-94ನೇ ಸಾಲಿನಲ್ಲಿ ಮೇಲ್ಭಾವಣಿ ಹೆಂಚುಗಳ ಸರಬರಾಜಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಗೆ ವಿರುದ್ಧವಾಗಿ ಅಕ್ರಮ ಎಸಗಿರುವುದು ಹಾಗೂ ಸರ್ಕಾರಿ ಹಣವನ್ನು ಮುಂಗಡವಾಗಿ ಸರಬರಾಜುದಾರರಿಗೆ ಪಾವತಿ ಮಾಡಿರುವುದು ನಿಯಮಗಳಿಗೆ ವಿರುದ್ಧವಾಗಿರುವುದಾಗಿ ಕಂಡುಬಂದಿರುವುದರಿಂದ, ಸರ್ಕಾರವು ತೀರ್ಥಹಳ್ಳಿಯ ಅಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಎಂ.ಮಹೇಶ್ವರಯ್ಯ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಭಾಗಾಧಿಕಾರಿ, ಬೆಂಗಳೂರು ವಿಭಾಗ, ಬೆಂಗಳೂರು ಇವರನ್ನು ಶಿಸ್ತು ಪ್ರಾಧಿಕಾರಿಯನ್ನಾಗಿ ದಿನಾಂಕ 12-1-95ರ ಸಂಖ್ಯೆ:ಆರ್ಡಿಪಿ.224 ಇಎನ್ಕ್ಯೂ. 94ರ ಆದೇಶದಲ್ಲಿ ನೇಮಕ ಮಾಡಿದೆ. ಈ ಬಗ್ಗೆ ವಿಚಾರಣೆ ಪೂರ್ಣಗೊಂಡಿದ್ದು ವಿಚಾರಣಾ ವರದಿ ಪರಿಶೀಲನೆಯಲ್ಲಿದೆ. ಅದರಂತೆ ನಿಯಮಾನುಸಾರ ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

+ಶ್ರೀ ಅರಗ ಜ್ಞಾನೇಂದ್ರ:- ಸನ್ಮಾನ್ಯ ಉಪಾಧ್ಯಕ್ಷರೇ, ಹಣ, ಒಡವೆ ಹಾಗೂ ಇತರೆ ವಸ್ತುಗಳು ಕಳ್ಳತನ ಆಗುವಂಥಾದ್ದು ಮತ್ತು ದರೋಡೆ ಆಗುವಂಥಾದ್ದನ್ನು ನಾವು ಕೇಳಿದ್ದೇವೆ. ನನ್ನ ಕ್ಷೇತ್ರದಲ್ಲಿ ವಿಚಿತ್ರವಾಗಿರತಕ್ಕಂಥ ಕಳ್ಳತನವಾಗಿದೆ. ಇದಕ್ಕೆ ಸಂಬಂಧಪಟ್ಟಹಾಗೆ ಮಾನ್ಯ ಸಚಿವರ ಗಮನವನ್ನು ನಾನು ಸೆಳೆದಿದ್ದೇನೆ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಹರಿಜನರಿಗೋಸ್ಕರ, ಬಡವರಿಗೋಸ್ಕರ, ದುರ್ಬಲ ವರ್ಗದವರಿಗೋಸ್ಕರ ಕೊಟ್ಟಿರತಕ್ಕಂಥ ಬಾವಿಗಳು ನಾನು ಹೋಗಿ ನೋಡಿದಾಗ ಕಳ್ಳತನವಾಗಿಬಿಟ್ಟಿವೆ, ಮನೆಗಳೂ ಕಳ್ಳತನವಾಗಿಬಿಟ್ಟವೆ, ಕಟ್ಟಡಗಳೇ ಕಳ್ಳತನವಾಗಿಬಿಟ್ಟಿವೆ. ನಾನು ಬಿ.ಡಿ.ಓ ಆಫೀಸ್‌ನಲ್ಲಿ ವಿಚಾರಿಸಿದರೆ, ಆ ಹಣ ಪಾವತಿಯಾಗಿ, ಬಿಲ್ ಆಗಿ ಸಂಪೂರ್ಣವಾಗಿ ಹೋಗಿಬಿಟ್ಟಿದೆ. ಅವರ ಲೆಕ್ಕದಲ್ಲಿ ಬಾವಿಗಳು ಸಂಪೂರ್ಣವಾಗಿವೆ. ಕನ್ನಂಗಿ, ನೆಲ್ಲಿಸಾರ ಈ ತರಹ ತಾವು ಈಗ ಏನು ಉತ್ತರ ಕೊಟ್ಟಿರಿ ಆ ಸ್ಥಳಗಳಿಗೆ ನಾನು ಹೋದನಂತರ ಗೊತ್ತಾಗಿದ್ದು ಆ ಫಲಾನುಭವಿಗಳಿಗೆ. ಬಾವಿ ಮಂಜೂರಾಗಿದೆ ಎಂದು ಹೇಳುವಂಥ ವಿಷಯವೇ ಅವರಿಗೆ ಗೊತ್ತಿರಲಿಲ್ಲ. ಬಾವಿಗಳೇ ಕಳ್ಳತನವಾಗಿಬಿಟ್ಟಿವೆ ನನ್ನ ಕ್ಷೇತ್ರದಲ್ಲಿ. ದಯಮಾಡಿ ಸರ್ಕಾರದವರು ಅದನ್ನು ಹುಡುಕಿಸಿ ಕೊಡಬೇಕು. ಸಂಬಂಧಪಟ್ಟ ಇಲಾಖೆಯನ್ನು ಜಾಗೃತ ಮಾಡಿ, ಪೋಲೀಸೋ ಅಥವಾ ಲೋಕಾಯುಕ್ತವೋ ಯಾವುದೋ ಒಂದು ಮಾಡಿ ದಯಮಾಡಿ ಹುಡುಕಿಕೊಡಿ. ಏಕೆಂದರೆ ನಾನು ಹೇಳುತ್ತೇನೆ, ಸರ್ಕಾರ ಹಣವೇ ಇಲ್ಲ ಎಂದು ಹೇಳುತ್ತದೆ. ಕೊಟ್ಟಂಥ ಹಣವನ್ನು ಇಂಥ ಅಯೋಗ್ಯರು ದುರುಪಯೋಗ ಮಾಡಿಕೊಂಡು ಹಣ ತಿಂದು, ದುರ್ಬಲವರ್ಗದವರಿಗೆ ಕೊಡತಕ್ಕಂಥದನ್ನು ವಂಚನೆ ಮಾಡುತ್ತಾರೆ ಎಂದರೆ ಇವರಿಗೆ ಕಠಿಣವಾಗಿರತಕ್ಕಂಥ ಶಿಕ್ಷೆಯನ್ನು ಕೊಡಬೇಕು. ಇಂಥ ಅಧಿಕಾರಿಗಳನ್ನು ತತ್‌ಕ್ಷಣ ಪೋಲೀಸರಿಗೆ ಹ್ಯಾಂಡ್ ಓವರ್ ಮಾಡಿ ಜೈಲಿನಲ್ಲಿ ಇಡಬೇಕು. ಇಂಥ ಕಾರ್ಯಕ್ರಮ ಎಲ್ಲಿಯವರೆಗೆ ನಿಮ್ಮ ಕಡೆಯಿಂದ ಆಗುವುದಿಲ್ಲ, ಬಹುಶಃ ಯಾವುದೇ ಸರ್ಕಾರ ಬಂದರೂ ಕೂಡ ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ ಮತ್ತು

ದುರ್ಬಲ ವರ್ಗದವರನ್ನು ಮೇಲೆತ್ತಲಿಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ. ತಾವು ಏನು ಹೇಳಿದಿರಿ, ಜೂನಿಯರ್ ಇಂಜಿನಿಯರ್ ಮೇಲೆ ತನಿಖೆಯಾಗುತ್ತಿದೆ ಎಂದು, ಇದೇ ಜೂನಿಯರ್ ಇಂಜಿನಿಯರ್ ಹೊಸನಗರ ತಾಲ್ಲೂಕಿನಲ್ಲಿ 5 ಲಕ್ಷ ರೂಪಾಯಿಗಳಲ್ಲನ್ನು ಇದೇ ಯೋಜನೆಯಲ್ಲಿ ದುರುಪಯೋಗ ಮಾಡಿಕೊಂಡಿದ್ದಾನೆ. ಅದು ಸಾಬೀತಾಗಿದೆ. ಕೆಂಚಪ್ಪ ಎನ್ನುವಂಥ ಜೂನಿಯರ್ ಇಂಜಿನಿಯರ್‌ನಿಂದ ಅಲ್ಲಿ ದುರುಪಯೋಗವಾಗಿದೆ ಎಂದು ಹೇಳಿ ನನ್ನ ತಾಲ್ಲೂಕಾದ ತೀರ್ಥಹಳ್ಳಿಗೆ ಹಾಕಿದರು. ತೀರ್ಥಹಳ್ಳಿಯಲ್ಲಿ ಸುಮಾರು 15 ಲಕ್ಷ ರೂಪಾಯಿಗಳು. 3 ವರ್ಷದ ಹಿಂದೆ ಅವರ ಮೇಲೆ ಕಂಪ್ಲೆಂಟ್ ಮಾಡಿದ್ದೇನೆ, ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ನಾನು ಶಾಸಕನಾದ ಮೇಲೆ ಕಂಪ್ಲೆಂಟ್ ಮಾಡಿದ್ದೇನೆ. ಸಸ್‌ಪೆನ್‌ಷನ್ ಶಿಕ್ಷೆ ಅಲ್ಲ. ಸಸ್‌ಪೆನ್‌ಷನ್ ಆದಮೇಲೆ ಅವನನ್ನು ಮತ್ತೆ ವಾಪಸ್ಸು ಕೆಲಸಕ್ಕೆ ತೆಗೆದುಕೊಂಡು ನಮ್ಮ ತಾಲ್ಲೂಕನ್ನು ಬಿಟ್ಟು ಮತ್ತೆ ಸೊರಬ ತಾಲ್ಲೂಕಿಗೆ ಹಾಕಿದ್ದಾರೆ, ಅಲ್ಲಿ, ಒಂದಷ್ಟು ಮೇಯಲಿ ಎಂದು. ಅವನಿಂದ ನೀವು ಏನು ರೆಕವರಿ ಮಾಡುತ್ತೀರಿ? ಇನ್ನು ಒಂದು ವರ್ಷದಲ್ಲಿ ಆತ ರಿಟೈರ್ಡ್ ಆಗತಕ್ಕಂಥ ವ್ಯಕ್ತಿ. ಅವನ ಸಂಬಳದಲ್ಲಿ ಕೂಡ ರೆಕವರಿ ಮಾಡುವುದಕ್ಕೆ ಬರುವುದಿಲ್ಲ. ಇಂಥ ವ್ಯಕ್ತಿಗಳನ್ನು ಹಾಗೇ ಬಿಡುತ್ತಿದ್ದೀರಿ ನೀವು. ನಾನು ಹೇಳಿದೆ, ಸಂಬಂಧಪಟ್ಟ ಬಿ.ಡಿ.ಓ ಮತ್ತು ಆತ ಇಬ್ಬರೂ ಕೂಡಿ ಬಿಲ್ ಮಾಡಿಕೊಂಡು ತಿಂದಿದ್ದಾರೆ ಅವರು. ಅವರಿಬ್ಬರೂ ಪಾರ್ಟನರ್ಸ್. ಬಿ.ಡಿ.ಓ ಮೇಲೆ ಕೂಡ ಕಂಪ್ಲೆಂಟ್ ಲಾಡ್ಜ್ ಮಾಡಿದ್ದೇನೆ. ನಾನು ಕಂಪ್ಲೆಂಟ್ ಲಾಡ್ಜ್ ಮಾಡಿದ ಮೇಲೆ ಏನಾಯಿತು ಎಂದರೆ ಬಿಡಿಓ ಅನ್ನು ಇಓ ಆಗಿ ಪ್ರೊಮೋಷನ್ ಕೊಟ್ಟಿದ್ದಾರೆ. ಇದು ಸರ್ಕಾರ ಕೊಡುವಂಥ ಶಿಕ್ಷೆಯೇ? ನಾನು ಕೇಳುತ್ತೇನೆ, ಇದು ದಯಮಾಡಿ ಯಾರಿಗೂ ಗೌರವ ತರುವಂಥ ಸಂಗತಿ ಅಲ್ಲ. ಮಾನ್ಯ ಮಂತ್ರಿಗಳು ತುಂಬಾ ಸೌಜನ್ಯಶೀಲರು ಮತ್ತು ಗ್ರಾಮೀಣಾಭಿವೃದ್ಧಿ ಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಂಥ ಪ್ರಾಮಾಣಿಕ ಕಳಕಳಿ ಇರತಕ್ಕಂಥವರು, ಅದನ್ನು ನಾನು ಒಪ್ಪುತ್ತೇನೆ, ಅವರ ಬಗ್ಗೆ ನನಗೆ ಗೌರವ ಇದೆ. ಇಂಥ ಮಂತ್ರಿಗಳಿಗೆ ಕೂಡ ಅಗೌರವ ಮಾಡತಕ್ಕಂಥ ವ್ಯಕ್ತಿಗಳು ನಿಮ್ಮ ಇಲಾಖೆಯಲ್ಲಿ ದುಡಿಯುತ್ತಿದ್ದಾರೆ. ಇವರ ಮೇಲೆ ಎಷ್ಟರಮಟ್ಟಿನ ಕಠಿಣ ಕ್ರಮವನ್ನು ಜರುಗಿಸುತ್ತೀರಿ ಮತ್ತು ಕೇವಲ ಅವರ ಮೇಲೆ ಕಠಿಣ ಕ್ರಮವನ್ನು ಜರುಗಿಸಿ ಏನೋ ಆಗುವುದು, ತಿಂಗಳಿಗೆ 250 ರೂಪಾಯಿ ಸಂಬಳದಲ್ಲಿ ವಸೂಲಿ ಮಾಡುವುದು, ಇದು ಉಪಯೋಗವಾಗುವುದಿಲ್ಲ. ಅವರನ್ನು ಜೈಲಿನಲ್ಲಿ ಇಡಬೇಕು ಮತ್ತು ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಯಾರು ಈ ಹರಿಜನ ಬಂಧುಗಳಿದ್ದಾರೆ ಇವರಿಗೆ ಬಾವಿ ಆಗಲಿಲ್ಲ, ಮನೆ ಆಗಲಿಲ್ಲ, ಅವರು ಹತ್ತಾರು ಜನ ನನ್ನ ಮನೆಯ ಹತ್ತಿರ ಬಂದು ಕುಳಿತುಕೊಳ್ಳುತ್ತಾರೆ. ನಾನು ಶನಿವಾರದ ದಿವಸ ರಜೆ ಇದೆ ಎಂದು ಊರಿಗೆ ಹೋಗುವ ಹಾಗೆ ಇಲ್ಲ. ನನ್ನ ಮನೆ ಹತ್ತಿರ ಹರಿಜನರು ಬಂದು ಕುಳಿತುಕೊಳ್ಳುತ್ತಾರೆ. ಅಯ್ಯಾ ನನಗೆ ಏನಾದರೂ ಮಾಡಿಕೊಡಿ, ಬಾವಿ ಆಗಲಿಲ್ಲ, ಮನೆ ಆಗಲಿಲ್ಲ ಮಾಡಿಸಿಕೊಡಿ, ಮಳೆಗಾಲವಾದ್ದರಿಂದ ನಾವು ಎಲ್ಲಿಗೆ ಹೋಗೋಣ ಎಂದು ಹೇಳುತ್ತಾರೆ. ಮಲೆನಾಡಿನ ಮಳೆಗಾಲ ತಮಗೆ ಗೊತ್ತಿದೆ. ಹೊಸ ಮನೆ ಆಗುತ್ತದೆ ಎಂದು

ಹಳೆ ಮನೆ ಬಿಟ್ಟುಬಂದರು. ಇವತ್ತು ಅವರು ಯಾರಯಾರದೋ ಜೋಪಡಿ ಬಾಗಿಲಿನಲ್ಲಿ ಗಡಿಗೆ ಇಟ್ಟಕೊಂಡು ತಿನ್ನುತ್ತಿದ್ದಾರೆ. ಬಹಳ ದಾರುಣವಾಗಿರತಕ್ಕಂಥ ಸ್ಥಿತಿ ನನ್ನ ತಾಲ್ಲೂಕಿನಲ್ಲಿದೆ. 3 ವರ್ಷದಿಂದ ನಾನು ಕಂಪ್ಲೆಂಟ್ ಮಾಡುತ್ತಾ ಬಂದರೂ ಕೂಡ ಯಾರ ಮೇಲೂ ಏನೂ ಕ್ರಮ ಆಗಿಲ್ಲ. ಅಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಒಬ್ಬ ಐಎಎಸ್ ಅಧಿಕಾರಿ ಇದ್ದಾರೆ. ಇವರ ಗಮನಕ್ಕೂ ನಾನು ಸಾಕಷ್ಟು ಸಾರಿ ತಂದೆ. ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ, ಆತ ಒಳ್ಳೆಯ ವ್ಯಕ್ತಿ, ಆತ ದುಡ್ಡು ತಿಂದಿದ್ದಾನೆ ಎಂದು ನಾನು ಹೇಳುವುದಿಲ್ಲ. ತತ್‌ಕ್ಷಣ ಕ್ರಮ ಜರುಗಿಸಲಿಕ್ಕೆ ಆಗದಿದ್ದರೆ, ಆ ವ್ಯಕ್ತಿಯನ್ನು ಶಿವಮೊಗ್ಗ ಜಿಲ್ಲಾ ಪರಿಷತ್ತಿನಲ್ಲಿ ಇಡಬೇಡಿ. ಈ ಕಡೆ ಎಲ್ಲಾದರೂ ತಂದು ಅವರನ್ನು ಬೇರೆ ಯಾವುದಾದರೂ ಇಲಾಖೆಗೆ ಹಾಕಿ. ಅವರ ಬಗ್ಗೆ ನನಗೆ ಗೌರವ ಇದೆ. ಅವರು ದುಡ್ಡು ತಿನ್ನುವುದಿಲ್ಲ. ಆದರೆ ಆಡಳಿತ ಸರಿಯಾಗಿ ಮಾಡಲಿಕ್ಕೆ ಬರದಿದ್ದರೆ, ಬಿಗಿಯಾದಂಥ ಆಡಳಿತ ಮಾಡುವುದಕ್ಕೆ ಬರದಿದ್ದರೆ ಗ್ರಾಮೀಣಾಭಿವೃದ್ಧಿ ಕ್ರಿಯೆಗೆ ನೀವು ಕೊಟ್ಟಿರತಕ್ಕಂಥ ಹಣವೆಲ್ಲವೂ ಕೂಡ ಹೀಗೆ ದುರುಪಯೋಗವಾಗುತ್ತದೆ. ದಯಮಾಡಿ ಇಂಥ ಯೋಜನೆ ಮತ್ತು ದಶಲಕ್ಷ ಬಾವಿ ಯೋಜನೆಗಳು ಮತ್ತು ನಮ್ಮಲ್ಲಿ ಒಂದು ಚಿಲುಮೆ ಬಾವಿ ಎಂದು ನಮ್ಮ ಮಲೆನಾಡಿನಲ್ಲಿ ಇದೆ, ಐದಾರು ಸಾವಿರ ಕೊಟ್ಟು, 3 ಮನೆ, 4 ಮನೆ ಇದ್ದಂಥ ಕಡೆ ಗುಮ್ಮಿ ಬಾವಿಯಲ್ಲಿ ಏನು ನೀರು ಕುಡಿಯುತ್ತಿದ್ದರು ಜಮೀನಿನ ಒಳಗಡೆ, ಅದನ್ನು ಶುದ್ಧವಾಗಿ ಇರತಕ್ಕಂಥ ನೀರನ್ನು ಕುಡಿಯಲು ನಮ್ಮ ಜಿಲ್ಲಾ ಪರಿಷತ್ತಿನವರು ನಾವು ಎಲ್ಲಾ ಜೊತೆ ಸೇರಿ ಒಂದು ನಿರ್ಣಯ ಮಾಡಿ ಹಣ ಒದಗಿಸಿದ್ದೇವೆ. 5 ಸಾವಿರ, 6 ಸಾವಿರ ರೂಪಾಯಿ ಬಾವಿಗೆ ಆಗುತ್ತದೆ, ಕಲ್ಲುಕಟ್ಟಿ ಚೆನ್ನಾಗಿ ಮಾಡಿದ್ದಾರೆ. ಅಲ್ಲಿ ಬಾವಿಗಳೇ ಇಲ್ಲ ಮಾನ್ಯ ಮಂತ್ರಿಗಳೇ. 5 ಸಾವಿರ 6 ಸಾವಿರ ಬಿಲ್ ಮಾಡಿಕೊಂಡು ತಿಂದಿದ್ದಾರೆ ಇವರು. ಅಲ್ಲಿ ಬಾವಿ ಇಲ್ಲ. ಯಾರಯಾರದೋ ಹೆಸರಿನಲ್ಲಿ ಬಿಲ್ ಆಗುತ್ತದೆ. ದಯಮಾಡಿ, ಇವೆಲ್ಲಾ ಕಾರ್ಯಕ್ರಮಗಳು ಬಿಲ್ ಮಾಡಿ ತಿನ್ನುವುದಕ್ಕೋಸ್ಕರ ಇರುವಂಥ ಕಾರ್ಯಕ್ರಮಗಳು ಆಗಬಾರದು. ನಾನು ಬಹಳ ನೋವಿನಿಂದ ಹೇಳುತ್ತೇನೆ, ದಯಮಾಡಿ ಪ್ರಾಮಾಣಿಕವಾಗಿ ಅವರ ಮೇಲೆ ತಕ್ಷಣ ಕ್ರಮ ಜರುಗಿಸಬೇಕು. ಇನ್ನೂ ಡಿಲೇ ಆಗಬಾರದು. ಈಗಾಗಲೇ ಡಿಲೇ ಆಗಿದೆ. ಇನ್ನೂ ಬಿಟ್ಟರೆ ಅವರು ಕೊಬ್ಬುತ್ತಾರೆ. ಬೇರೆ ಬೇರೆ ಇನ್‌ಫ್ಲೂಯೆನ್ಸ್‌ಗಳು ಬರುತ್ತವೆ, ಇವರು ತಪ್ಪಿಸಿಕೊಳ್ಳಲಿಕ್ಕೆ ಬೇರೆಬೇರೆ ರೆಕಾರ್ಡ್‌ಗಳನ್ನು ಮಾಡುತ್ತಿದ್ದಾರೆ. ನೆರಳು ಭಾಗ್ಯ ಯೋಜನೆ, ಬಡವರಿಗೆ ಕೊಡತಕ್ಕಂಥ ಯೋಜನೆ, ಅದರಲ್ಲಿ ಹಣ ಹೊಡೆದರು, 1,800 ರೂಪಾಯಿಗೆ ನಾಲ್ಕನೇ ದರ್ಜೆಯ ಹೆಂಚನ್ನು ತಂದು 2,800 ರೂಪಾಯಿ ಬಿಲ್ಲನ್ನು ಮಾಡಿ ತಿಂದಿದ್ದಾರೆ. ಸುಮಾರು 5 ಲಕ್ಷ ರೂಪಾಯಿಗಳನ್ನು ತಿಂದಿದ್ದಾರೆ, ದುರುಪಯೋಗವಾಗಿದೆ. ಅವರು ಇವತ್ತು ತಪ್ಪಿಸಿಕೊಳ್ಳುತ್ತಿದ್ದಾರೆ. ಒಂದೂವರೆ ವರ್ಷದಿಂದ ಈ ಬಗ್ಗೆ ಎನ್‌ಕ್ವೈರಿ ನಡೆಯುತ್ತಿದೆ. ಒಂದು ಟೈಮ್ ಬೌಂಡ್ ಪ್ರೋಗ್ರಾಂ ಇಲ್ಲದೇ ಹೋದರೆ ಈ ಎನ್‌ಕ್ವೈರಿಗಳಿಗೆ ಏನಾದರೂ ಅರ್ಥ ಇರುತ್ತದೆಯೇ. ನನ್ನಂಥ ಒಬ್ಬ ಶಾಸಕ, ಒಬ್ಬ ಜನ ಪ್ರತಿನಿಧಿ ಇಂಥ ಒಂದು ವೇದಿಕೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಕ್ಕೆ ಏನಾದರೂ ಒಂದಷ್ಟು

ಉಪಯೋಗ ಆಗಬೇಕು. ಅವರೇನೂ ನಮ್ಮ ದಾಯಾದಿ ಮಕ್ಕಳು ಅಲ್ಲ, ಅಥವಾ ನಾನೇನಾದರೂ ಕೇಳಿದ್ದರೆ ಪಾಲು ಕೊಡುತ್ತಿದ್ದರೋ, ಏನೋ? ಆದರೆ ಪ್ರಾಮಾಣಿಕವಾಗಿ ಜನರ ಒಂದು ಸಮಸ್ಯೆಯನ್ನು ಹೇಳುತ್ತೇನೆ. ಈ ಒಂದು ದುರುಪಯೋಗ ಆಗಿರುವಂಥಾದ್ದನ್ನು ಪ್ರಾಮಾಣಿಕವಾಗಿ ನಾವು ಪ್ರಸ್ತಾಪ ಮಾಡಿದರೆ ಅದಕ್ಕೆ ಒಂದು ಬೆಲೆ ಬಾರದೇ ಹೋದರೆ ತುಂಬಾ ಕಷ್ಟವಾಗುತ್ತದೆ. ದಯಮಾಡಿ ಈ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು, ಅರೆಸ್ಟ್ ಮಾಡಿಸಬೇಕು, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಇದನ್ನು ಲೋಕಾಯುಕ್ತ ಅಥವಾ ಯಾವುದಾದರೂ ಒಂದರಿಂದ ಇವರನ್ನು ತನಿಖೆಗೆ ಒಳಮಾಡಬೇಕು. ಆಮೇಲೆ ಈ ರೀತಿ ಬಾವಿ ಮತ್ತು ಮನೆ ಇಲ್ಲದೇ ಇರತಕ್ಕಂಥ ಬಡವರಿಗೆ ತಕ್ಷಣವೇ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕು. ಬಾವಿ ಮತ್ತು ಮನೆಗಳನ್ನು ಮಾಡಿಕೊಡಬೇಕು ಬೇರೆ ಯಾವುದಾದರೂ ಯೋಜನೆಯಲ್ಲಿ ಇಲ್ಲದಿದ್ದರೆ ತೊಂದರೆಯಾಗುತ್ತದೆ. ನೀವು ಇವರ ಮೇಲೆ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳಿ ಸುಮ್ಮನೆ ಇದ್ದುಬಿಟ್ಟರೆ ಅವರಿಗೆ ಬಾವಿ, ಮನೆ ಮತ್ತೆ ಮಾಡಲಿಕ್ಕೆ ಆಗುವುದಿಲ್ಲ, ಎಲ್ಲೆಂದರಲ್ಲಿ ಅವರು ಕಷ್ಟಪಡುತ್ತಿದ್ದಾರೆ. ದಯಮಾಡಿ ತಾವು ಮಾಡಬೇಕು ಎಂದು ವಿನಂತಿ ಮಾಡುತ್ತೇನೆ.

+ಶ್ರೀ ವೈ.ರಾಮಕೃಷ್ಣ:- ಸನ್ಮಾನ್ಯ ಉಪಾಧ್ಯಕ್ಷರೇ, ತಾವು ಸರ್ಕಾರದವರು ಈ ವರ್ಷ ವರ್ಗಾವಣೆ ಇಲ್ಲ ಎಂದು ಹೇಳಿದರೆ, ಇದು ಬಹಳ ಸಂತೋಷದ ಸಂಗತಿ. ಆದರೆ ಆ ಮರೆಯಲ್ಲಿ ಕೆಲವು ಕರಪ್ಟ್ ಅಧಿಕಾರಿಗಳು ಏನಿದ್ದಾರೆ, ಅವರು ನಾವು ಏನು ಮಾಡಿದರೂ ನಮ್ಮನ್ನು ಇಲ್ಲೇ ಕಂಟಿನ್ಯೂ ಮಾಡುತ್ತಾರೆ, ಏಕೆಂದರೆ ಗವರ್ನಮೆಂಟ್ ಆರ್ಡರ್ ಇದೆ ಎನ್ನತಕ್ಕಂಥ ಮನೋಭಾವದಿಂದ ಲಂಚವನ್ನೂ ಹೊಡೆಯುತ್ತಾರೆ, ಮಾಡಬಾರದ್ದನ್ನೆಲ್ಲಾ ಮಾಡುತ್ತಾರೆ, ಭ್ರಷ್ಟಾಚಾರ ಮಾಡುತ್ತಾರೆ. ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ತಾವು ಮನಸ್ಸು ಮಾಡಿದ್ದೀರಿ ಎನ್ನುವುದು ಒಂದು. ಎರಡನೆಯದು ಎಂದರೆ, ಅವರು ಹೇಳಿದರಲ್ಲ, 3 ವರ್ಷದಿಂದ ನಾನು ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಇಷ್ಟೊಂದು ದುರುಪಯೋಗವಾಗಿದೆ, ಬಡವರ ಹಣ, ಹಿಂದುಳಿದವರ ಹಣ, ಹರಿಜನ ಗಿರಿಜನರ ಹಣ ದುರುಪಯೋಗವಾಗುತ್ತಿದೆ ಎಂದು. ಏಕೆ ತಾವು ಕ್ರಮ ತೆಗೆದುಕೊಳ್ಳಲಿಲ್ಲ. ಇಂಥ ಕರಪ್ಟ್ ಆಫೀಸರ್‌ಗಳಿಗೆ ತಾವು ಏಕೆ ಶಿಕ್ಷೆ ಮಾಡಲಿಲ್ಲ. ಒಬ್ಬರನ್ನು ತಾವು ಸರಿಯಾಗಿ ಶಿಕ್ಷೆ ಮಾಡಿದರೆ, ಇಡೀ ರಾಜ್ಯದಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳಿಗೂ ಭಯ ಬರುತ್ತದೆ. ದಯವಿಟ್ಟು ಇದನ್ನು ತಾವು ತೀವ್ರವಾಗಿ ಗಮನಿಸಿ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ಭಾವಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶಾಸಕರು ಏನು ಅಭಿಪ್ರಾಯ ವ್ಯಕ್ತಮಾಡಿದ್ದಾರೆ, ಅದು ನಿಜವಾಗಿಯೂ ಕೂಡ ಶೋಚನೀಯ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಉಪಾಧ್ಯಕ್ಷರೆ, ಈಗ

ಕೆಲವು ಡಾಕ್ಯೂಮೆಂಟ್‌ಗಳನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡಬೇಕು. ಅದಕ್ಕೋಸ್ಕರ ಮಾತನಾಡುವುದಕ್ಕೆ ಅವಕಾಶ ಕೇಳುತ್ತಿದ್ದೇನೆ. ಇದೇ ರೀತಿ ಚಿತ್ರದುರ್ಗದಲ್ಲಿ ಆಗಿರತಕ್ಕಂಥ ಡಾ: ಅಂಬೇಡ್ಕರ್ ಮನೆ ಬಗ್ಗೆ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತಿದ್ದೇನೆ. ಅಲ್ಲಿ ಏನಾಗಿದೆ ಎಂದರೆ ಡಾಕ್ಯೂಮೆಂಟ್‌ನಲ್ಲಿ ಪೂರ್ತಿ ಬ್ಲಾಂಕ್ ಇದೆ. ನಾನು ಫಲಾನುಭವಿಯ ಮನೆಯನ್ನು ಇನ್ಸ್‌ಪೆಕ್ಷನ್ ಮಾಡಿದೆ, ದುಡ್ಡು ಕೊಡಬಹುದೆಂದು ಬರೆದಿದ್ದಾರೆ. ಅಲ್ಲಿ ಯಾರ ಮನೆಯನ್ನು ಇನ್ಸ್‌ಪೆಕ್ಷನ್ ಮಾಡಿದ್ದಾರೆ ಎನ್ನುವುದು ಇಲ್ಲ. ಮತ್ತು ಮನೆ ಕಟ್ಟಿಯಾಗಿದೆಯೆಂದು ಅದರ ಮೊತ್ತಕ್ಕೆ ಚೆಕ್ ಕೊಟ್ಟುಬಿಟ್ಟಿದ್ದಾರೆ. ಫಲಾನುಭವಿಯ ಸಹಿ ಇಲ್ಲ. ಈಗ ಮಾನ್ಯ ಸಚಿವರಿಗೆ ಕೊಡುತ್ತಿರುವ ಡಾಕ್ಯೂಮೆಂಟ್‌ಗಳು ಎಲ್ಲಾ ಒರಿಜಿನಲ್ ಆಗಿವೆ. ಯಾರು ಫಲಾನುಭವಿಗಳು ಇದ್ದಾರೆ ಅವರಿಗೆ ಯಾರಿಗೂ ಸಹ ಮನೆಗಳು ಸಿಕ್ಕಿಲ್ಲ. ಈ ಒರಿಜಿನಲ್ ಡಾಕ್ಯೂಮೆಂಟ್ಸ್ ಹೇಗೆ ಬಂತು ಎಂದು ಕೇಳಬೇಡಿ. ದಯಮಾಡಿ ಇದರ ಬಗ್ಗೆ ಪರಿಶೀಲನೆ ಮಾಡಿ ಏನು ಮಾಡಬಹುದು ಎನ್ನುವುದನ್ನು ತಾವು ದಯವಿಟ್ಟು ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಈಗ ಇಲ್ಲಿ ವಿಷಯವನ್ನು ತಿಳಿಸಿದ್ದಾರೆ ಮತ್ತು ಅನೇಕ ವೇದಿಕೆಗಳಲ್ಲಿ ಕೂಡ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಇಂತಹ ಅವ್ಯವಹಾರಗಳು 1993-94 ಮತ್ತು 1994-95ನೇ ಸಾಲಿನಲ್ಲಿ ಆಗಿರತಕ್ಕಂಥ ಕೆಲವು ಘಟನೆಗಳು. ಅವರು ಶಾಸಕರಾದ ಮೇಲೆ ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಮತ್ತು ನನಗೆ ಬೇರೆ ಬೇರೆ ಮನವಿಗಳು ಬಂದ ಮೇಲೆ ಅದಕ್ಕೆ ಸಂಬಂಧಿಸಿರತಕ್ಕಂಥ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರನ್ನು ಕೂಡ ಅಮಾನತ್ತು ಮಾಡಿದ್ದೇವೆ. ಕೆಂಚಪ್ಪ ಎನ್ನುವ ಒಬ್ಬ ಅಧಿಕಾರಿಯನ್ನು ಆತನನ್ನು...

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಿಲ್ಲ. ರೆಕಾರ್ಡ್ ತಪ್ಪಾಗುತ್ತದೆ. ಬಿ.ಡಿ.ಓ ರವರನ್ನು ಇದುವರೆವಿಗೆ ಅಮಾನತ್ತಿನಲ್ಲಿ ಇಡಲಿಲ್ಲ. ಅವರಿಗೆ ಪ್ರಮೋಷನ್ ಸಿಕ್ಕಿದೆ.

ಶ್ರೀ ಎಂ.ಪಿ.ಪ್ರಕಾಶ್:- ಅವರು ಅಮಾನತ್ತಿನಲ್ಲಿದ್ದು ಪ್ರಮೋಷನ್ ..

ಶ್ರೀ ಅರಗ ಜ್ಞಾನೇಂದ್ರ:- ಇಲ್ಲ, ಮಾನ್ಯ ಮಂತ್ರಿಗಳು ದಯಮಾಡಿ ಇನ್ನೊಂದು ಸಾರಿ ಸರಿಯಾದ ಮಾಹಿತಿಯನ್ನು ತರಿಸಿಕೊಂಡು ಹೇಳಿ. ಇಲ್ಲದೆ ಹೋದರೆ ರೆಕಾರ್ಡ್‌ನಲ್ಲಿ ತಪ್ಪಾಗುತ್ತದೆ. ಅವರನ್ನು ಅಮಾನತ್ತಿನಲ್ಲಿ ಇಡಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಸಭಾಧ್ಯಕ್ಷರೆ, ಒಬ್ಬ ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಟ್ಟ ಸಂದರ್ಭದಲ್ಲಿಯೇ ಅವರಿಗೆ ಬಡ್ತಿ ಕೊಡುವುದು ಹೇಗೆ? ಇಂಥ ವ್ಯವಸ್ಥೆ ಯಾವ ಪ್ರಪಂಚದಲ್ಲಿ ಇದೆ? ಒಬ್ಬನನ್ನು ಅಮಾನತ್ತಿನಲ್ಲಿ ಇಟ್ಟು ಆತನಿಗೆ ಬಡ್ತಿ ಕೊಟ್ಟೆ ಎಂದು ಅವರು ಹೇಗೆ ಹೇಳಿದರೋ ನನಗೆ ಗೊತ್ತಾಗುತ್ತಿಲ್ಲ.

ಉಪಾಧ್ಯಕ್ಷರು:- ತಾವು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಹೇಳುತ್ತಾರೆ.

+ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಾಧ್ಯಕ್ಷರೆ, ಈ ಕೆಂಚಪ್ಪ ಎನ್ನುವವರನ್ನು ನಾವು 27-5-1995ರಂದು ಅಮಾನತ್ತಿನಲ್ಲಿ ಇಟ್ಟು ಅವರನ್ನು 12-10-95ರಂದು ನಾವು ಪುನರ್ ನೇಮಕಾತಿ ಮಾಡಿಕೊಂಡಿದ್ದೇವೆ. ಏಕೆಂದರೆ ನಮ್ಮದೇ ಆಡಳಿತ ಮಂಡಳಿಯಲ್ಲಿ ಕೂಡ ವಿಚಾರಣೆ ಇರುವಂಥ ಸಂದರ್ಭದಲ್ಲಿಯೇ 3 ತಿಂಗಳಿಗಿಂತ ಹೆಚ್ಚು ಕಾಲ ಅವರು ಅಮಾನತ್ತಿನಲ್ಲಿ ಇದ್ದರೆ ವಿಚಾರಣೆ ಪೆಂಡಿಂಗ್ ಇರುವಂಥ ಸಂದರ್ಭದಲ್ಲಿಯೇ ಅಂತಹವರನ್ನು ಸೇರಿಸಿಕೊಳ್ಳಬೇಕು ಎನ್ನುವಂಥ ನಿಯಮಾವಳಿಗಳ ಕೆಳಗೆ ಆತ ಪುನಃ ಅರ್ಜಿಯನ್ನು ಕೊಟ್ಟರು. ಮತ್ತು ಅಲ್ಲಿಯೇ ಆತ ಇರುವುದರಿಂದ ದಾಖಲೆಗಳನ್ನು ತಿದ್ದಬಹುದು ಅಥವಾ ಏನಾದರೂ ನಾಶ ಮಾಡಬಹುದು ಎನ್ನುವಂಥ ಕಾರಣಕ್ಕಾಗಿ ಸೊರಬಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿ ಭ್ರಷ್ಟಾಚಾರ ಇಲ್ಲ ಎನ್ನುವಂಥ ಮಾತನ್ನು ಹೇಳುತ್ತಿಲ್ಲ ಅಥವಾ ಇವರನ್ನು ಏನಾದರೂ ಅಲ್ಲಿಯೇ ಉಳಿಸಿಕೊಳ್ಳಬೇಕು ಎನ್ನುವಂಥ ಪ್ರಯತ್ನ ಇಲ್ಲ. ಇವರೆಲ್ಲ ಹಿರಣ್ಯಾಕ್ಷನ ವಂಶಕ್ಕೆ ಸೇರಿದವರು. ನೀವು ಬಾವಿ ಇಲ್ಲವೆಂದು ಹೇಳಿದಿರಿ. ಅವರು ಪೃಥ್ವಿಯನ್ನೇ ಚಾಪೆ ಮಾಡಿ ತೆಗೆದುಕೊಂಡು ಹೋಗಲಿಲ್ಲವಲ್ಲ, ಅಷ್ಟೇ ಸಂತೋಷ. ಬಾವಿ ಇಲ್ಲದಂತೆ ಮಾಡಿದ್ದಾರೆ, ಮನೆ ಇಲ್ಲದಂತೆ ಮಾಡಿದ್ದಾರೆ. ಅದೇ ರೀತಿ ಮಹೇಶ್ವರಪ್ಪ ಎನ್ನುವವರ ಮೇಲೂ ಕೂಡ ನಾವು ವಿಭಾಗಾಧಿಕಾರಿಯನ್ನು ನೇಮಕಾತಿ ಮಾಡಿದ್ದೇವೆ. ಇವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಎಂದು ಬೆಂಗಳೂರಿನ ವಿಭಾಗಾಧಿಕಾರಿಯವರಿಗೆ ತನಿಖೆ ಮಾಡುವುದಕ್ಕೆ ಒಪ್ಪಿಸಿದ್ದೆವು. ಅವರು ಆ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಶಿಸ್ತಿನ ಕ್ರಮದ ಬಗ್ಗೆ, ನೀತಿ ನಡವಳಿಕೆಗಳು ಏನು ಎಂಬುದು ತಮಗೆ ಗೊತ್ತಿದೆ. ಈ ಕೂಡಲೆ.....

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಉಪಾಸಭಾಧ್ಯಕ್ಷರೆ, ಇದು ನೆರಳು ಭಾಗ್ಯ ಯೋಜನೆಗೆ ಸಂಬಂಧಪಟ್ಟ ಹಾಗೆ ಮಾತ್ರ ವಿಭಾಗಾಧಿಕಾರಿಗಳಿಂದ ತನಿಖೆ ಆಗಿದೆ. ಈ ಬಾವಿ ಮತ್ತು ಮನೆಗಳ ದುಡ್ಡು ಲಪಟಾಯಿಸಿದ ಮಹೇಶ್ವರಪ್ಪನವರ ಮೇಲೆ ಏನೂ ತನಿಖೆ ಆಗಲಿಲ್ಲ.

+ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಾಧ್ಯಕ್ಷರೆ, ಟಿ.ಡಿ.ಕೆಂಚಪ್ಪ ಎನ್ನುವಂಥ ಕಿರಿಯ ಅಭಿಯಂತರರ ಮೇಲೆ ಬಂದಿರತಕ್ಕಂಥ ಅಲಿಗೇಷನ್ಸ್ ಏನು ಇವೆ ಅದನ್ನು ನಾನು ಉತ್ತರದಲ್ಲಿ ಕೂಡ ಕೊಟ್ಟಿದ್ದೇನೆ. ಅವರು 10 ಲಕ್ಷ ರೂಪಾಯಿಗಳನ್ನು ಅವರು ಬ್ಯಾಂಕಿನಲ್ಲಿ ಇಟ್ಟಿದ್ದಾರೆ. 3 ಲಕ್ಷ ರೂಪಾಯಿಗಳ ದುರುಪಯೋಗ ಆಗಿದೆಯೆಂದು ಹೇಳಿ ಮೇಲ್ನೋಟಕ್ಕೆ ಕಂಡು ಬಂದ ತಕ್ಷಣವೇ ಇವರನ್ನು ಅಮಾನತ್ತಿನಲ್ಲಿ ಇಟ್ಟಿದ್ದೇವೆ. ವಿಚಾರಣೆ ಇನ್ನೂ ಸಂಪೂರ್ಣವಾಗಿ ಮುಗಿದಿಲ್ಲ. ವಿಚಾರಣೆ ಮುಗಿದಿಲ್ಲದಂಥ ಸಂದರ್ಭದಲ್ಲಿ 5 ತಿಂಗಳುಗಳು ಅವಧಿ ಆದಮೇಲೆ ಅವರನ್ನು ಮರು ನೇಮಕಾತಿ ಮಾಡಿ ಸೊರಬ ತಾಲ್ಲೂಕಿಗೆ ವರ್ಗ ಮಾಡಿದ್ದೇವೆ. ಇವರು ಯಾವ ಯಾವ ಕಡೆಯಲ್ಲಿ ಕೆಲಸ ಮಾಡಿದ್ದಾರೆ, ಇಂಥವೇ ಒಂದು ಭ್ರಷ್ಟಾಚಾರದ ಜಾಲವನ್ನೇ ಬಿಟ್ಟುಹೋಗಿದ್ದಾರೆ ಎನ್ನುವ ಮಾತಿನ ಬಗ್ಗೆ ನಾನು ಗೌರವಿಸುತ್ತೇನೆ; ಇಲ್ಲವೆಂದು ಹೇಳುವುದಿಲ್ಲ. ಆದರೆ ಇವರೆಲ್ಲರೂ

ಕೂಡ ಕಾಯಿದೆ ಕೆಳಗೆ ಉಳಿದುಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತಾ ಇದ್ದಾರೆ. ಆದರೆ ಭ್ರಷ್ಟಾಚಾರಿಗಳಾದಂಥ ಅಧಿಕಾರಿಗಳ ಮೇಲೆ ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ನೆರಳಿನ ಭಾಗ್ಯಕ್ಕೆ ಸಂಬಂಧಪಟ್ಟಂತೆ, ನೆರಳು ಭಾಗ್ಯ ಯೋಜನೆಯಲ್ಲಿ 1993-94ನೇ ಸಾಲಿನಲ್ಲಿ ಮೇಲ್ಚಾವಣಿ ಹೆಂಚುಗಳ ಸರಬರಾಜಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಗೆ ವಿರುದ್ಧವಾಗಿ ಅಕ್ರಮ ನಡೆಸಿರುವುದು ಕಂಡುಬಂದಮೇಲೆ ನಾವು ವಿಚಾರಣಾ ಅಧಿಕಾರಿಯನ್ನಾಗಿ ವಿಭಾಗಾಧಿಕಾರಿಗಳು, ಬೆಂಗಳೂರು ಇವರನ್ನು ನೇಮಕ ಮಾಡಿದ್ದೇವೆ. ಯಾರಾದರೂ ಚಿಕ್ಕಪುಟ್ಟ ಅಧಿಕಾರಿಯನ್ನು ನೇಮಕ ಮಾಡಿದರೆ ಅವರಿಂದ ಸರಿಯಾದಂಥ ಮಾಹಿತಿ ದೊರಕಲಾರದು ಎನ್ನುವ ಕಾರಣಕ್ಕಾಗಿ ವಿಭಾಗಾಧಿಕಾರಿಯನ್ನು ನೇಮಕ ಮಾಡಿದ್ದೇವೆ. ಅವರು ಈಗ ವರದಿಯನ್ನು ಕೊಟ್ಟಿದ್ದಾರೆ. ಈ ವರದಿ ಇರತಕ್ಕಂಥ ಸಂದರ್ಭದಲ್ಲಿ ಅದನ್ನು ವಿಚಾರಣೆ ಮಾಡಿ ಅವರ ವರದಿ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ಪದೋನ್ನತಿಯಾಗಿದ್ದರೂ ಕೂಡ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಕೆಂಚಪ್ಪ ಎನ್ನುವವರ ಮೇಲೆ ಕೂಡ ಕ್ರಮ ಕೈಗೊಳ್ಳುತ್ತೇವೆ. ಇದೇ ರೀತಿ ಬೇರೆ ಬೇರೆ ಕಡೆಯೂ ಸಹ ಅವ್ಯವಹಾರ ಆಗಿದೆಯೆಂದು ಹೇಳಿ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಏನು ಡಾಕ್ಯುಮೆಂಟ್ಸ್ ಕೊಟ್ಟಿದ್ದಾರೆ ಅದರ ಬಗ್ಗೆ ಈ ದಿವಸವೇ ನಾನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿಕೊಟ್ಟು ಅವರಿಂದ ಸರಿಯಾದ ವರದಿಯನ್ನು ತರಿಸಿಕೊಂಡು, ಅದನ್ನು ತಮಗೂ ಕಳುಹಿಸಿಕೊಡುತ್ತೇನೆ ಮತ್ತು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಉಪಸಭಾಧ್ಯಕ್ಷರೇ, ಈ ಮನೆ ಮತ್ತು ಬಾವಿ ಕಳೆದುಕೊಂಡಂಥ ವ್ಯಕ್ತಿಗಳಿಗೆ ಏನು ಪರಿಹಾರ ಕೊಡುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಲಿಲ್ಲ. ಅವರಿಗೆ ಮನೆ ಕಟ್ಟಿಸಿಕೊಡುತ್ತೀರೋ? ಬಾವಿ ಮಾಡಿಸಿಕೊಡುತ್ತೀರೋ? ಮತ್ತು ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ದಯಮಾಡಿ ತಾವು ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಸಭಾಧ್ಯಕ್ಷರೆ, ಯಾರೋ ಒಬ್ಬರು ಭ್ರಷ್ಟಾಚಾರದಿಂದಾಗಿಯೇ ಈ ರೀತಿಯಾದಂಥ ಅನುಕೂಲಗಳಿಂದ ವಂಚಿತರಾಗಿರತಕ್ಕಂಥ ಫಲಾನುಭವಿಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡುತ್ತೇವೆ. ಅದರಲ್ಲಿ ಯಾವ ಪ್ರಶ್ನೆಯೂ ಇಲ್ಲ. ಅವ್ಯವಹಾರ ನಡೆಸಿದ ತಪ್ಪಿತಸ್ಥ ಅಧಿಕಾರಿಗಳಿಂದ ಹಣ ವಸೂಲಿ ಮಾಡತಕ್ಕಂತದ್ದನ್ನು ಮಾಡುತ್ತೇವೆ ಮತ್ತು ಅಂತಹ ಅಧಿಕಾರಿ ಏನಾದರೂ ನಿವೃತ್ತಿಯಾಗುತ್ತಾ ಇದ್ದರೆ, ನಿವೃತ್ತಿಯಾಗಿದ್ದರೂ ಕೂಡ ಆತನಿಗೆ ಬರತಕ್ಕಂಥ ಪಿಂಚಣಿ ಮುಂತಾದವುಗಳಿಂದ ಈ ಹಣವನ್ನು ವಸೂಲಿ ಮಾಡಲಿಕ್ಕೆ ಸಾಧ್ಯತೆ ಇದೆ. ನಿಯಮಾವಳಿಗಳ ಅನುಸಾರವಾಗಿ ಏನೆಲ್ಲ, ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿದೆಯೋ ಅದೆಲ್ಲವನ್ನೂ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಉಪಸಭಾಪತಿಗಳೆ, ಮನೆ ಮತ್ತು ಬಾವಿಗಳನ್ನು ಈ

ವರ್ಷವೇ ಮಾಡಿಸಿಕೊಡುತ್ತೀರೋ? ಈ ವರ್ಷವೇ ಆಗಬೇಕೆಂದು ಸಚಿವರುಗಳಾದ ತಾವು ಆದೇಶ ಕೊಡುತ್ತೀರೋ?

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಸಭಾಧ್ಯಕ್ಷರೆ, ಇಲ್ಲಿ ಎತ್ತಿರತಕ್ಕಂಥ ಸೀಮಿತ ಪ್ರಶ್ನೆಗೆ ಎಲ್ಲವನ್ನೂ ಇಲ್ಲಿಯೇ ಉತ್ತರ ಕೊಡುವುದಾದರೆ ನಮ್ಮಿಬ್ಬರ ನಡುವೆಯೇ ಸಂವಾದ ಆಗಿಹೋಗಿಬಿಡುತ್ತದೆ. ಇದನ್ನು ಹೇಳಿದ್ದೇನೆ. ಅದು ಆದಮೇಲೆ ಕುಳಿತು ಮಾತನಾಡಿ. ನೀವು ಏನೇನು ಆಗಬೇಕೆಂದು ಬರೆದು ಕೊಡಿ. ಇಲ್ಲದೇ ಹೋದರೆ ಇಬ್ಬರ ನಡುವೆ ಈ ಸಂವಾದ ನಡೆಯುತ್ತಿದ್ದರೆ ಇಡೀ ಸದನದ ಸಮಯವೂ ಸಹ ಹಾಳಾಗುತ್ತದೆ.

ಶಾಸನ ರಚನೆ

ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 1996

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಬಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ;

''1996ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹೆಚ್.ಬಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - I

ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 1996

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):- ಮಾನ್ಯ ಉಪಾಧ್ಯಕ್ಷರೆ, 1996ರ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.